ಮೂರರಲ್ಲಿ ಯಾವುದನ್ನು ಹೆಚ್ಚು ಬಯಸುತ್ತೇನೆ ಎಂಬ ಪ್ರಶ್ನೆ ಎದುರಾಯಿತು. ಒಂದು ದೇಹಕ್ಕೆ ಇನ್ನೊಂದು ದೇಹ ಅಗತ್ಯ ಎಂದಾಗ ಅಲ್ಲಿ ಕೇವಲ ಒಪ್ಪಿತ ರತಿ ಸುಖ ಇರುತ್ತೊ ಇಲ್ಲವೇ ಬದುಕಿನ ಅನಿವಾರ್ಯತೆಗೆ ಬೇಕಾಗುವ ಸಂಬಂಧ ಮುಖ್ಯವಾಗಿರುತ್ತೋ ಎಂದು ಗೊಂದಲಗೊಂಡ. ಈ ಬಗೆಯ ಪ್ರಶ್ನೆಗಳೇ ಇದುವರೆಗೂ ತನಗೆ ಯಾವುದೇ ಒಂದು ಹೆಣ್ಣನ್ನು ಆಯ್ಕೆ ಮಾಡಿಕೊಳ್ಳಲು ಅಡ್ಡವಾಗಿರಬಹುದು ಎನ್ನುತ್ತಾ, 'ಪ್ರೇಮ ಕಾಮ ಪ್ರೀತಿ ಇವೆಲ್ಲ ತರ್ಕದ ಆಚೆಗೆ ಇರುತ್ತವಲ್ಲಾ' ಎಂದು ಕೇಳಿದ. 'ತರ್ಕದ ಆಚೆಗೆ ಎಂದರೆ ಏನು?' ಎನ್ನುತ್ತಾ ಮೆಲ್ಲಗೆ ನಗಾಡಿ 'ನೀವು ಆ ರೀತಿಲೆಲ್ಲಾ ಯಾಕೆ ಯೋಚಿಸ್ತೀರಿ. ಯಾವುದನ್ನೇ ಮಾಡೋ ಮೊದಲು ಬರೀ ಹೀಗೆ ಮಾತಾಡೋದ್ರಿಂದ್ಲೇ ನಮ್ಮ ನಮ್ಮ ಉದ್ದೇಶಗಳು ಸರಿಯಾದ ದಾರಿ ಮುಟ್ಟದೇ ಹೋಗೋದು' ಎಂದು ಹೇಳಿ ತಾನಾಡುತ್ತಿರುವ ಮಾತು ಯಾರದೋ ಗಂಡಸರ ಸಾಲುಗಳಂತಿವೆ ಎನಿಸಿ ಇವನ ಜೊತೆ ಮಾತಿಗೆ ಕೂತರೆ ಹೀಗೆಯೇ, ತನ್ನ ಹೆಣ್ತನದ ಭಾಷೆಯನ್ನೇ ಮರೆಸಿ ಬಿಡುತ್ತಾನೆ ಎಂದುಕೊಂಡು 'ನಾನು ಉಟ್ಟಿರೋ ಈ ಸ್ಯಾರಿ ಹೇಗ್ ಕಾಣ್ಸುತ್ತೆ' ಎಂದು ಕೇಳಿದಳು. 'ನೀವು ಬೇಸರ ಮಾಡ್ಕೊಳೋದಿಲ್ಲ ಅಂದರೆ ಹೇಳ್ತೀನಿ' ಎನ್ನುತ್ತಾ ನೀವು ಉಟ್ಟಿರೋ ಸೀರೆ ಸೆರಗನ್ನು ಮುಟ್ಟಿ, ಬೆರಳಿಗೆ ನುಲಿದುಕೊಂಡು ಅಂಗೈಗೆ ಸುತ್ತಿಕೊಂಡು ಮುಖದ ಬಳಿ ತಂದುಕೊಂಡು ಅದರ ಗಮ್ಮನೆ ಗೌಲನ್ನು ಕುಡಿದು ನಿಟ್ಟುಸಿರು ಬಿಡುವಷ್ಟು ಚೆನ್ನಾಗಿದೆ' ಎಂದ. ಅಷ್ಟು ಹೊತ್ತಿನ ತನಕ ಹಿಡಿದುಕೊಂಡಿದ್ದ ಅವಳ ಕಪೋಲದ ಮಾಂಸಖಂಡಗಳು ರಂಗು ಬಣ್ಣದಲ್ಲಿ ಚೆಲ್ಲನೆ ಚಿಮ್ಮಿಕೊಂಡು 'ಅಷ್ಟೊಂದು ಚೆನ್ನಾಗಿದೆಯಾ; ಇಲ್ಲ ಸುಳ್ಳು ಹೇಳ್ತಿದ್ದೀರಿ' ಎಂದು ಹುಲ್ಲಿನ ದಳಗಳ ನಡುವೆ ಬಿಟ್ಟಿದ್ದ ಯಾವುದೋ ಬಿಳಿಯ ಸಣ್ಣ ಹೂವನ್ನು ಕಿತ್ತು ರೇಗಿಸುವಂತೆ ಅವನ ಮೇಲೆ ಎಸೆದಳು. 'ನನಗೆ ಗುಲಾಬಿ ಹೂಗಳೆಂದರೆ ಇಲ್ಲವೇ ದೊಡ್ಡ ಹೆಸರು ಮಾಡಿಕೊಂಡು ಮಾರ್ಕೆಟ್‌ನಲ್ಲಿ ಮೆರೆಯುವ ಹೂವುಗಳೆಂದರೆ ಇಷ್ಟವಿಲ್ಲ. ನನಗೆ ಇಂಥ ಸಣ್ಣದಾದ ಹುಡುಗಿಯರು ಮುಡಿಯಲು ಬಳಸದೆ ಇರೋ ಹೂವುಗಳೇ ಇಷ್ಟ' ಎಂದು ಅದನ್ನೆತ್ತಿಕೊಂಡು 'ಈ ಹೂ ನನಗೆ ಕೊಟ್ಟಿದ್ದಾ' ಎಂದ. ಆಕೆ ನಾಚಿಕೆಯಿಂದ ಮಾತನಾಡಲಿಲ್ಲ. 'ಥ್ಯಾಂಕ್ಯೂ' ಎಂದು ಹೇಳುತ್ತಾ ಆ ಹೂವನ್ನು ಮುಖದ ಬಳಿ ತಂದುಕೊಂಡ.

★★★

ಅಷ್ಟು ಹೊತ್ತಿಗಾಗಲೇ ಅಲ್ಲೆಲ್ಲ ಬಿಸಿಲು ಕುಣಿಯುತ್ತಿತ್ತು. ಶಾಖ ಹೆಚ್ಚುತ್ತಿತ್ತು. ಇವನ ಯಾವತ್ತೂ ಅಸ್ಥಿರತೆ ಹಿಂಡುತ್ತಿತ್ತು. ನಡುನಡುವೆ ಹೆಣ್ಣ ಜೊತೆ ಕಳೆವ ಕ್ಷಣಗಳೇ ಎಂಥ ಹಿತ ಎಂದು ತಟ್ಟುತ್ತಿತ್ತು. ನೀಲಿಬಣ್ಣದ ಅವಳ ಸಲ್ವಾರ್ ಕಮೀಜ್ ಬಿಸಿಲಿಗೆ ಹೊಳೆಯುತ್ತಾ ಸಣ್ಣಗೆ ಮೂಡುತ್ತಿದ್ದ ಅವಳ ತುಟಿಮೇಲಿನ ಬೆವರ ನಡುವೆ ಸೂಕ್ಷ್ಮವಾದ ಮೀಸೆಯಂತಹ ಕೂದಲುಗಳು ಸೆಳೆಯುತ್ತಿದ್ದವು. ಯಾವ ರೀತಿ ಕೇಳುವುದು, ತಾನೀಗ ಕೇಳಿದರೆ ಅವಳ ಪ್ರತಿಕ್ರಿಯೆಗೆ ಹೇಗೆ ಮುಖಾಮುಖಿಯಾಗುವುದು ಎನಿಸಿ ಅಧೀರತೆ ಹೆಚ್ಚಿತು. 'ಈ ಕಾಲದ ಪ್ರೇಮಕ್ಕೂ ಹಳೆಯಕಾಲದ ಪ್ರೇಮಕ್ಕೂ ವ್ಯತ್ಯಾಸ ಏನಿದೆ' ಎಂದು ಕೇಳಬೇಕೆಂದುಕೊಂಡು, ಇಂಥ ಹೈಸ್ಕೂಲ್ ಪ್ರಶ್ನೆಯಿಂದ ಖಂಡಿತ ತಾನು ಅವಮಾನಕ್ಕೆ ಒಳಗಾಗಬೇಕಾಗುತ್ತದೆಂದು ಸುಮ್ಮನಾದ.

ಅವಳು ಹೇಳಿದಳು. ಕೋರ್ಸ್ ಮುಗಿಸಿ ಈಗ ಮನೆಗೆ ಹೋಗಿ ಅದೇ ಪಾತ್ರೆ ತಿಕ್ಕುವ ಕೆಲಸಕ್ಕೆ ಕೈಗೂಡಿಸುವ, ಹಸೆಗಲ್ಲ ಮೇಲೆ ರಾಗಿ ಮುದ್ದೆ ಕಟ್ಟುವ, ಹೆಸರಿಗೆ ತಕ್ಕಷ್ಟು ಉಪ್ಪುಕಾರ ಹಾಕುವ ಮತ್ತು ಊಟ ಮಾಡಿದ ಮೇಲೆ ಎಲ್ಲರ ಎಂಜಲೆತ್ತಿ, ಪಾತ್ರೆಗಳನ್ನು ಬೆಳಗಿ, ಕಸಗುಡಿಸಿ, ಚಾಪೆ ಹಾಸಿ, ಹಾಸ್ಟೆಲ್ ಜೀವನದಲ್ಲಿ ಸರೀಕರಂತಿರಲು ಕೊಂಡಿದ್ದ ಹಾಸಿಗೆ ಹಾಕ್ಕೊಂಡು ಅದರ ಮೇಲೆ ಈಗ ತನ್ನ ಅವ್ವನನ್ನು ಮಲಗಿಸಿ, ಯಾವುದೋ ಕಾದಂಬರಿ ಹಿಡಿದು ಓದುವ ನೆಪದಲ್ಲಿ ಬಾರದ ನಿದ್ದೆಯ ನಡುವೆ ದಾಳಿಯಿಡುವ ನೆನಪುಗಳ ಒಳಗೆ ಕುದಿಯುತ್ತಾ ಬೇಯುತ್ತಾ ತನ್ನ ಅರಿವಿಗೆ ಬಾರದ ವಿಷಣ್ಣತೆಗಳ